## ಕರ್ನಾಟಕ ವಿಧಾನ ಪರಿಷತ್

1. ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1998
3. ಉತ್ತರಿಸಬೇಕಾದ ದಿನಾಂಕ : 27-03-2020

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕುದೂರು ಹೋಬಳಿ ಬಿಸ್ಕೂರು ಗ್ರಾಮ ಪಂಚಾಯತ್‌ಗೆ "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಡಿಯಲ್ಲಿ 2017-18 ಮತ್ತು 2018-19ನೇ ಸಾಲಿನಲ್ಲಿ ಸಾಮಗ್ರಿ ಬಿಲ್ಲು" ಪಾವತಿಯಾಗದಿರಲು ಕಾರಣವೇನು; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ, ತೆಗೆದುಕೊಂಡ ಕ್ರಮಗಳೇನು; | ಮಹಾತ್ಮ ಗಾಂಧಿ ನರೇಗಾ ಯೋಜನೆಯ ಮಾರ್ಗಸೂಚಿಗಳನ್ವಯ ಕೂಲಿ ಮತ್ತು ಸಾಮಗ್ರಿ ವೆಚ್ಚದ ಅನುಪಾತವು ಶೇ.60:40ರ ಮಿತಿಯಲ್ಲಿರಬೇಕಾಗುತ್ತದೆ. ಕೂಲಿ ಮತ್ತು ಸಾಮಾಗ್ರಿ ವೆಚ್ಚದ ಅನುಪಾತವು ಶೇ.60:40 ಕ್ಕಿಂತ ಹೆಚ್ಚಾಗಿರುವುದರಿಂದ ನರೇಗಾ ತಂತ್ರಾಂಶದಲ್ಲಿ FTO (Fund Transfer Order) ಸೃಜಿಸಲು ಸಾಧ್ಯವಾಗುವುದಿಲ್ಲ. ಕಾರಣ ಬಾಕಿ ಉಳಿದಿರುತ್ತದೆ.<br><br>ಹೌದು. ಈ ಯೋಜನೆಯಡಿ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುದೂರು ಹೋಬಳಿ ಬಿಸ್ಕೂರು ಗ್ರಾಮ ಪಂಚಾಯತಿಯಲ್ಲಿ 2017-18ನೇ ಸಾಲಿನಲ್ಲಿ ರೂ. 0.44 ಲಕ್ಷ ಮತ್ತು 2018-19ನೇ ಸಾಲಿನಲ್ಲಿ ರೂ. 67.25 ಲಕ್ಷ ಸಾಮಗ್ರಿ ಬಿಲ್ಲು ಪಾವತಿಗೆ ಬಾಕಿ ಇದ್ದು, ಮಾರ್ಗಸೂಚಿಗಳನ್ವಯ ಕೂಲಿ ಮತ್ತು ಸಾಮಗ್ರಿ ವೆಚ್ಚದ ಅನುಪಾತವು ಶೇ.60:40ರ ಪಾಲನೆಯಲ್ಲಿ ಜಿಲ್ಲಾವಾರು ವೆಚ್ಚಕ್ಕೆ ಅನುಗುಣವಾಗಿ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗಿರುತ್ತದೆ. ಅದರಂತೆ, ರಾಮನಗರ ಜಿಲ್ಲೆಗೆ ದಿನಾಂಕ: 02-03-2020 ಮತ್ತು 05-03-2020ರಂದು ಸಾಮಗ್ರಿ ವೆಚ್ಚದ ಬಾಬ್ತು ಬಿಡುಗಡೆ ಮಾಡಲಾಗಿರುತ್ತದೆ. |
| ಆ) | ಸದರಿ ಬಿಲ್‌ಗಳನ್ನು ಸಂದಾಯ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು ಯಾವಾಗ? | ಕಾರ್ಮಿಕ ಆಯವ್ಯಯಕ್ಕೆ ಅನುಗುಣವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕಾಲಕಾಲಕ್ಕೆ ಬಿಡುಗಡೆಯಾಗುತ್ತಿರುವ ಅನುದಾನದಿಂದ ಯೋಜನೆಯ ಮಾರ್ಗಸೂಚಿಗಳನ್ವಯ ಜಿಲ್ಲಾ ಮಟ್ಟದಲ್ಲಿ 40% ಸಾಮಗ್ರಿ ವೆಚ್ಚ ಮೀರದಂತೆ ಬಾಕಿ ಮೊತ್ತವನ್ನು ಪಾವತಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಗ್ರಾಅಪ 38(145) ಉಖಾಯೋ 2019

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು